ದಿನಾಂಕ 27.10.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ- ವಾದಿ ಪರ ವಕೀಲರಿಂದಃ-**

ನಾನು ಈ ದಾವೆಯಲ್ಲಿ ವಾದಿಯ ಜಿ.ಪಿ.ಎ ಹೋಲ್ಡರ್ ಆಗಿದ್ದು, ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ಈ ದಿನ ನ್ಯಾಯಾಲಯದಲ್ಲಿ ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದೇ ಆಗಿದೆ.

ನೋಟರಿ ದೃಢೀಕೃತ ಜಿ.ಪಿ.ಎ ಯನ್ನು ನಿ.ಪಿ.1 ಎಂದು, ಗಣಕೀಕೃತ ಪಹಣಿಪತ್ರಿಕೆಗಳನ್ನು ನಿ.ಪಿ. 2 ರಿಂದ 6 ಎಂದು, ಶ್ರೀಮಂಗಲ ಪೊಲೀಸ್ ಠಾಣೆಯ ಆರಕ್ಷಕ ಉಪನಿರೀಕ್ಷಕರು ನೀಡಿದ ಹಿಂಬರಹವನ್ನು ನಿ.ಪಿ. 7 ಎಂದು, ಸ್ವೀಕೃತಿಯನ್ನು ನಿ.ಪಿ. 8 ಎಂದು, ಕಂದಾಯ ರಶೀದಿಯನ್ನು ನಿ.ಪಿ. 9 ಎಂದು, 3 ಫೋಟೋಗಳನ್ನು ನಿ.ಪಿ. 10 ರಿಂದ 12 ಎಂದು, ಸಿಡಿಯನ್ನು ನಿ.ಪಿ. 13 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

ಸಹಿಃ

ಹಿರಿಯ ಸಿವಿಲ್ ನ್ಯಾಯಾಧೀಶರು

ವಿರಾಜಪೇಟೆ.

(ಸಾಕ್ಷಿದಾರರ ಸಹಿ)